# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ | ಬೆಂಗಳೂರು, ಸೋಮವಾರ, ೧೦, ಜೂನ್, ೨೦೨೪(ಜ್ಯೇಷ್ಠ, ೨೦, ಶಕವರ್ಷ, ೧೯೪೬) | ನಂ. ೨೬೪ |
|---|---|---|
| Part – IVA | BENGALURU, MONDAY, 10, JUNE, 2024(JYEISHTA, 20, SHAKAVARSHA, 1946) | No. 264 |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 08 ಶಾಸನ 2023, ದಿನಾಂಕ: 10.06.2024**

ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕ, 2023 ಇದಕ್ಕೆ 2024ರ ಮಾರ್ಚ್ ತಿಂಗಳ 20ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024 ರ ಕರ್ನಾಟಕ ಅಧಿನಿಯಮ ಸಂಖ್ಯೆ: 30 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2024 ರ ಕರ್ನಾಟಕ ಅಧಿನಿಯಮ ಸಂಖ್ಯೆ:30**

(2024 ರ ಜೂನ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ, 2023

(2024 ರ ಮಾರ್ಚ್ ತಿಂಗಳ 20ನೇ ದಿನಾಂಕದಂದು ರಾಜ್ಯ ಪಾಲರಿಂದ ಅನುಮತಿ ಪಡೆಯಲಾಗಿದೆ)

1990ರ ಆಗಸ್ಟ 27 ರಿಂದ 7ನೇ ಸೆಪ್ಟೆಂಬರ್ ವರೆಗೆ ಕ್ಯೂಬಾದ ಹವಾನಾದಲ್ಲಿ ನಡೆದ ಅಪರಾಧ ಪ್ರತಿಬಂಧಕ ಮತ್ತು ಅಪರಾಧಿಗಳ ವರ್ತನೆ ಕುರಿತ ಎಂಟನೇ ವಿಶ್ವಸಂಸ್ಥೆ ಸಮ್ಮೇಳನದಲ್ಲಿ ಭಾರತವು ಭಾಗವಹಿಸಿ "ವಕೀಲರ ಪಾತ್ರ ಕುರಿತ ಮೂಲ ತತ್ವಗಳನ್ನು" ಅಳವಡಿಸಿಕೊಂಡಿತ್ತು. ವಕೀಲರ ಕಾರ್ಯನಿರ್ವಹಣೆಗಾಗಿನ ಖಾತರಿಗಳ ಕುರಿತ ಘೋಷಣೆಯ 16 ಹಾಗೂ 17ನೇ ಖಂಡಗಳು ಈ ಕೆಳಗಿನಂತಿವೆ, ಎಂದರೆ:-

"16. ವಕೀಲರು,-

(ಎ) ಬೆದರಿಕೆ, ಅಡ್ಡಿ, ಕಿರುಕುಳ ಅಥವಾ ಅನುಚಿತ ಹಸ್ತಕ್ಷೇಪರಹಿತವಾಗಿ ತಮ್ಮ ಎಲ್ಲಾ ವೃತ್ತಿಪರ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದನ್ನು;

(ಬಿ) ಅವರು ದೇಶ ಮತ್ತು ವಿದೇಶ ಎರಡರಲ್ಲಿಯೂ ಮುಕ್ತವಾಗಿ ಪ್ರಯಾಣಿಸಲು ಮತ್ತು ಅವರ ಕಕ್ಷಿದಾರರೊಂದಿಗೆ ಸಮಾಲೋಚಿಸಲು ಸಾಧ್ಯವಾಗುವುದನ್ನು; ಮತ್ತು

(ಸಿ) ಮಾನ್ಯ ಮಾಡಿದ ವೃತ್ತಿಪರ ಕರ್ತವ್ಯಗಳು, ಮಾನಕಗಳು ಮತ್ತು ನೈತಿಕತೆಗಳ ಅನುಸಾರವಾಗಿ ತೆಗೆದುಕೊಂಡ ಯಾವುದೇ ಕ್ರಮಕ್ಕಾಗಿ ಅಭಿಯೋಜನೆ ಅಥವಾ ಆಡಳಿತಾತ್ಮಕ, ಆರ್ಥಿಕ ಅಥವಾ ಇತರೆ ನಿರ್ಬಂಧಗಳನ್ನು ಅನುಭವಿಸತಕ್ಕದ್ದಲ್ಲ ಅಥವಾ ಭಯಪಡತಕ್ಕದ್ದಲ್ಲ ಎಂಬುದನ್ನು ,

-ಸರ್ಕಾರಗಳು ಖಚಿತಪಡಿಸತಕ್ಕದ್ದು.

17. ವಕೀಲರು ತಮ್ಮ ಪ್ರಕಾರ್ಯಗಳ ನಿರ್ವಹಣೆ ಮಾಡುವಲ್ಲಿ ಅವರ ಭದ್ರತೆಗೆ ಬೆದರಿಕೆ ಒಡ್ಡಿದಾಗ, ಪ್ರಾಧಿಕಾರಗಳು ಅವರನ್ನು ಸಂಪೂರ್ಣವಾಗಿ ಸಂರಕ್ಷಿಸತಕ್ಕದ್ದು".

ಆದ್ದರಿಂದ, ಈಗ ನ್ಯಾಯವಾದಿಗಳು ಯಾವುದೇ ಭಯ ಅಥವಾ ಬಾಹ್ಯ ಪ್ರಭಾವಕ್ಕೆ ಒಳಗಾಗದೆ ತಮ್ಮ ವೃತ್ತಿಪರ ಸೇವೆಗಳನ್ನು ಸಲ್ಲಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಅವರ ಮೇಲಿನ ಹಿಂಸೆಯನ್ನು ನಿಷೇಧಿಸುವುದು ಮತ್ತು ಅವರಿಗೆ ರಕ್ಷಣೆಯನ್ನು ನೀಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನ್ಯಾಯವಾದಿ" ಎಂದರೆ ನ್ಯಾಯವಾದಿಗಳ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 25)ರ 17ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಿದ ನ್ಯಾಯವಾದಿಗಳ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಮತ್ತು ಭಾರತದ ಬಾರ್ ಕೌನ್ಸಿಲ್ ಪ್ರಮಾಣ ಪತ್ರ ಮತ್ತು ವೃತ್ತಿ ನಿರತ ಸ್ಥಳ (ಪರಿಶೀಲನೆ) ನಿಯಮಗಳು, 2015ರ 4ನೇ ನಿಯಮದಡಿಯಲ್ಲಿ ಪರಿಭಾಷಿಸಲಾದಂತೆ, ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ನೀಡಿದ ಸಿಂಧುವಾದ ವೃತ್ತಿ ನಿರತ ಪ್ರಮಾಣ ಪತ್ರವನ್ನು ಹೊಂದಿರುವ ಮತ್ತು ಯಾವುದೇ ಬಾರ್ ಅಸೋಷಿಯೇಷನ್ ಸದಸ್ಯನಾಗಿರುವ ನ್ಯಾಯವಾದಿ ಅಥವಾ ಹಿರಿಯ ನ್ಯಾಯವಾದಿ ಅಥವಾ ಕಾನೂನು ವೃತ್ತಿನಿರತ;

**ವಿವರಣೆ:** ನ್ಯಾಯವಾದಿ ಎಂಬ ಪದವು ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಪ್ರಾಧಿಕಾರದ ಮುಂದೆ ಪಕ್ಷಕಾರರ ಪರವಾಗಿ ವಾದಮಂಡಿಸುವ ಒಬ್ಬ ನ್ಯಾಯವಾದಿ ಹಾಗೂ ಅಂಥ ಸಂಸ್ಥೆಯ ಅಧಿಕಾರಿಯೆಂದು ಭಾವಿಸತಕ್ಕ ಮತ್ತು ಅಂಥ ಸಂಸ್ಥೆಯ ಇತರೆ ಅಧಿಕಾರಿಗಳಿಗೆ ಲಭ್ಯವಿರುವ ಅದೇ ಉಪಚಾರವನ್ನು ನೀಡತಕ್ಕ ಪೊಲೀಸರನ್ನು ಒಳಗೊಳ್ಳುತ್ತದೆ.

(ಬಿ) "ಬಾರ್ ಅಸೋಷಿಯೇಷನ್" ಎಂದರೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ 2)ರ ಅಡಿಯಲ್ಲಿ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮೂಲಕ ಮಾನ್ಯತೆ ಪಡೆದ ಬಾರ್ ಅಸೋಸಿಯೇಷನ್;

(ಸಿ) "ವ್ಯಕ್ತಿ" ಎಂಬ ಪದವು,-

1. ಒಬ್ಬ ವ್ಯಕ್ತಿ;

2. ಕಂಪನಿ;

3. ಫರ್ಮ್;

4. ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ನಿಕಾಯ, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ,

-ಒಳಗೊಳ್ಳುತ್ತದೆ; ಮತ್ತು

(ಡಿ) "ಹಿಂಸಾಚಾರ" ಎಂದರೆ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಬಾಕಿಯಿರುವ ವ್ಯಾಜ್ಯ ಅಥವಾ ಮೊಕದ್ದಮೆಯ ಸಂಬಂಧದಲ್ಲಿ ನ್ಯಾಯವಾದಿಯು ತನ್ನ ಕರ್ತವ್ಯವನ್ನು ನಿರ್ವಹಿಸುವುದರಿಂದ ಆತನನ್ನು ಅಡ್ಡಿ ಪಡಿಸಲು ಆತನಿಗೆ ಜೀವಕ್ಕೆ ಅಪಾಯವಾಗುವ ಅಥವಾ ದೈಹಿಕ ಹಾನಿ ಅಥವಾ ಅಪರಾಧಿಕ ಭಯೋತ್ಪಾದನೆಯಂಥ ಯಾವುದೇ ಕಾರ್ಯಚಟುವಟಿಕೆ.

**ವಿವರಣೆ:1.**ಸಂಶಯಗಳ ನಿವಾರಣೆಗಾಗಿ, ಕಾನೂನು ಜಾರಿ ಏಜೆನ್ಸಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿನ ಯಾವುದೇ ಕಾನೂನಾತ್ಮಕ ಪ್ರತಿಬಂಧ ಕ್ರಮವು ಹಿಂಸಾಚಾರವಾಗುವುದಿಲ್ಲವೆಂಬುವುದನ್ನು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

**ವಿವರಣೆ:2.** ಮೇಲಿನದನ್ನು**,** ನ್ಯಾಯವಾದಿಗಳ ಅಧಿನಿಯಮ, 1961 ಅಥವಾ ಕಾನೂನಿನಡಿಯಲ್ಲಿ ಅನ್ವಯವಾಗುವಂತೆ ಅದರಡಿಯಲ್ಲಿ ರಚಿಸಿದ ಇತರೆ ವಿನಿಯಮಗಳ ಮೇರೆಗೆ ನ್ಯಾಯವಾದಿಯ ಯಾವುದೇ ಭಾದ್ಯತೆ ಅಥವಾ ಹೊಣೆಗಾರಿಕೆಗೆ ಬಾಧಕವಾಗುವುದಿಲ್ಲ

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ನ್ಯಾಯವಾದಿಗಳ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 25)ರಲ್ಲಿ ಭಾರತದ ಬಾರ್ ಕೌನ್ಸಿಲ್ ಪ್ರಮಾಣ ಪತ್ರ ಮತ್ತು ವೃತ್ತಿ ನಿರತ ಸ್ಥಳ (ಪರಿಶೀಲನೆ) ನಿಯಮಗಳು, 2015ರಲ್ಲಿ ಮತ್ತು ಭಾರತೀಯ ದಂಡ ಸಂಹಿತೆ, 1860ರಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಹಿಂಸಾಚಾರದ ನಿಷೇಧ**.- ಯಾರೇ ವ್ಯಕ್ತಿಯು, ನ್ಯಾಯವಾದಿಯ ಮೇಲೆ ಹಿಂಸಾಚಾರ ಕೃತ್ಯವನ್ನು ಎಸಗತಕ್ಕದ್ದಲ್ಲ.

**4. ನ್ಯಾಯವಾದಿಗಳಿಗೆ ಸಂಬಂಧಿಸಿದ ಅಪರಾಧಗಳಿಗಾಗಿ ದಂಡನೆ**.- (1) 3ನೇ ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಆರು ತಿಂಗಳುಗಳಿಂದ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

**5. ಅಪರಾಧದ ಸಂಜ್ಞೇಯತೆ**.- ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**6. ಬಂಧನದ ಮಾಹಿತಿ.-** ಸಂಜ್ಞೇಯ ಅಪರಾಧದ ಸಂಬಂಧದಲ್ಲಿ ನ್ಯಾಯವಾದಿಯನ್ನು ಪೊಲೀಸರು ಬಂಧಿಸಿದಾಗ, ಅಂಥ ಬಂಧನದ ಇಪ್ಪತ್ನಾಲ್ಕು ಘಂಟೆಯ ಒಳಗಾಗಿ ಅಂಥ ನ್ಯಾಯವಾದಿಯು ಸದಸ್ಯನಾಗಿರುವ ನ್ಯಾಯವಾದಿಗಳ ಅಸೋಷಿಯೇಷನ್ನಿನ ಅಧ್ಯಕ್ಷ ಅಥವಾ ಕಾರ್ಯದರ್ಶಿಗೆ ಅಂಥ ಬಂಧನದ ವಿಷಯವನ್ನು ಪೊಲೀಸರು ತಿಳಿಸತಕ್ಕದ್ದು.

**7. ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ರವರಿಂದ ಅಪರಾಧಗಳ ಅಧಿವಿಚಾರಣೆ ಮಾಡುವುದು.-**ಈ ಅಧಿನಿಯಮದ ಮೇರೆಗೆ ದಂಡನೀಯವಾದ ಪ್ರತಿಯೊಂದು ಅಪರಾಧವನ್ನು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಿಗಿಂತ ಕಡಿಮೆಯಿರದ ನ್ಯಾಯಾಲಯದ ಮೂಲಕ ಅಧಿವಿಚಾರಣೆ ನಡೆಸತಕ್ಕದ್ದು.

**8. ಅಧಿನಿಯಮವು ಯಾವುದೇ ಇತರ ಕಾನೂನನ್ನು ಅಲ್ಪೀಕರಿಸತಕ್ಕದ್ದಲ್ಲ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗಿರತಕ್ಕದ್ದು ಹಾಗೂ ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

**9. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಒಪ್ಪಿದರೆ ತದನಂತರ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಿದ ಅಥವಾ ಮಾಡದೇ ಇರುವ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಶ್ರೀ

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO. DPAL 08 SHASANA 2023, BENGALURU, DATED:10.06.2024**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ, 2023 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ:30) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ACT NO.30 OF 2024

(First Published in the Karnataka Gazette Extra-ordinary on the 10th day of June, 2024)

## THE KARNATAKA PROHIBITION OF VIOLENCE AGAINST ADVOCATES ACT, 2023

(Received the assent of the Governor on the 20th day of March, 2024)

Whereas, the Eighth United Nations Congress on the Prevention of Crime and the Treatment of Offenders, Havana, Cuba 27th August to 7th September 1990, to which India was a participant, has adopted the "Basic Principles on the Role of Lawyers". Clauses 16 and 17 of the declaration deal with -Guarantees for the functioning of lawyer which are as follows, namely:-

"16. Governments shall ensure the lawyers,-

(a) are able to perform all of their professional functions without intimidation, hindrance, harassment or improper interference;

(b) are able to travel and to consult with their clients freely both within their own country and abroad; and

(c) shall not suffer, or be threatened with, prosecution or administrative, economic or other sanctions for any action taken in accordance with recognized professional duties, standards and ethics.

17. Where the security of lawyers is threatened as a result of discharging their functions, they shall be adequately safeguarded by the authorities."

Now therefore it is expedient to prohibit violence against and provide protection to Advocates for rendering their professional services without fear or external influence and for matters connected therewith and incidental thereto;

Be it enacted by the Karnataka State Legislature in the Seventy-fourth year of the Republic of India, as follows:-

**1. Short title and commencement.-** (1) This Act may be called the Karnataka Prohibition of violence against Advocates Act, 2023.

(2) It shall come into force at once.

**2. Definitions.-**(1) In this Act, unless the context otherwise requires,-

(a) “Advocate” means an Advocate or Senior Advocate or a Legal Practitioner whose name is entered in the roll of advocates maintained under section 17 of the Advocates Act, 1961(Central Act 25 of 1961)and holding a valid certificate of practice issued by the Karnataka State Bar Council as defined under rule 4 of the Bar Council of India Certificate and Place of Practice (Verification) Rules, 2015 and is a member of any Bar Association;

**Explanation:** An Advocate pleading for a party before the Court, Tribunal or Authority, including the police shall deemed to be an Officer of such Institution and be extended same treatment available to other Officers of such Institution.

(b) “Bar Association” means a Bar Association recognized by the Karnataka State Bar Council under the Karnataka Advocates Welfare Fund Act, 1983 (Karnataka Act 2 of 1985);

(c) "Person" means and includes,-

1. an Individual;
2. a Company;
3. a Firm
4. an association of persons or a body of individuals, whether incorporated or not; and

(d) “Violence” means any activity which would endanger the life of an Advocate or cause bodily harm or criminal intimidation so as to obstruct him from discharge of his duty in respect of a pending litigation or a case pending before any Court, Tribunal or Authority.

**Explanation: 1.** For the removal of doubts it is hereby clarified that any lawful restraint or action by law enforcement agencies in discharge of their duty would not amount to violence.

**Explanation: 2.** That the above would not be prejudicial to any obligation or liability of an Advocate under the Advocates Act, 1961 or such other regulations made as applicable under law.

(2) All other words and expressions used but not defined in this Act, shall have the same meaning as assigned to them in the Advocates Act, 1961(Central Act 25 of 1961), the Bar Council of India Certificate and Place of Practice (Verification) Rules, 2015 and the Indian Penal Code, 1860.

**3. Prohibition of violence.-** No Person shall commit an act of violence against an Advocate.

**4. Punishment for offences relating to Advocates.-** Every person committing an offence under section 3 shall be punished with imprisonment for a term which may extend from six months to three years, or with fine which may extend to Rupees One lakh or with both.

**5. Cognizance of offence.-** Every offence punishable under this Act shall be cognizable.

**6. Intimation of arrest.-** Whenever an Advocate is arrested by the Police in respect of a cognizable offence, the Police shall, within twenty four hours of such arrest, intimate the factum of such arrest to the President or Secretary of the Advocates' Association in which such Advocate is a member.

**7. Offences to be tried by Judicial Magistrate of First Class.-** Every offence punishable under this Act shall be tried by the Court not below the Court of Judicial Magistrate of First Class.

**8. Act not in derogation of any other law.-** The provisions of this Act shall be in addition to and not in derogation of the provisions of the any other law, for the time being in force.

**9. Power to make rules.-** (1) The State Government may, by notification in the Official Gazette, make rules to carryout the purposes of this Act.

(2) Every rule made under this Act shall be laid, as soon as may be, after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session or sessions immediately following, both Houses agree in making any modification in the rule or both Houses agree that the rule should not be made, the rule shall

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done or omitted to be done under that rule.

The above translation of ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ, 2023 (2024 ರ ಕರ್ನಾಟಕ ಅಧಿನಿಯಮ ಸಂಖ್ಯೆ:30) be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH